ಶ್ರೀ ಎನ್.ಎಂ. ನಬಿ (ಸಣ್ಣ ಪ್ರಮಾಣದ ಕೈಗಾರಿಕೆಗಳ ಸಚಿವರು) :

ಅ) ಒಟ್ಟು ಸಣ್ಣ ಕೈಗಾರಿಕೆಗಳ ಸಂಖ್ಯೆ 15470
ಮುಚ್ಚಲ್ಪಟ್ಟಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ 2800

ಆ) ಈ ಕೆಳಕಂಡ ಕಾರಣಗಳಿಂದ ಕೈಗಾರಿಕೆಗಳು ಮುಚ್ಚಲ್ಪಟ್ಟಿವೆ :-

1) ದುಡಿಮೆ ಬಂಡವಾಳದ ಕೊರತೆ.

2) ಯೋಜನೆಯನ್ನು ಜಾರಿಗೊಳಿಸುವಲ್ಲಿ ಆದ ವಿಳಂಬ.

3) ವಿದ್ಯುಚ್ಛಕ್ತಿ ತೊಂದರೆ.

4) ಉದ್ಯಮೆಯು ಆಸಕ್ತಿ ವಹಿಸದೇ ಇರುವುದರಿಂದ

5) ಸರಿಯಾದ ತಾಂತ್ರಿಕ ಯೋಜನೆಯ ಅಭಾವದಿಂದ

6) ಸರಿಯಾದ ಆರ್ಥಿಕ ಯೋಜನೆಯ ಅಭಾವದಿಂದ.

7) ಕಾರ್ಮಿಕ ಸಮಸ್ಯೆಗಳು.

8) ಮೂಲಭೂತ ಸೌಲಭ್ಯಗಳ ತೊಂದರೆಗಳು.

9) ಆರ್ಥಿಕ ಮುಗ್ಗಟ್ಟು.

ಇ) ಮುಚ್ಚಿರುವ ಕೈಗಾರಿಕೆಗಳನ್ನು ತೆರೆಯಲು ಹಾಗೂ ಪುನಃ ಶ್ಚೇತನಕ್ಕಾಗಿ ರಾಜ್ಯದಲ್ಲಿ ಈಗಾಗಲೇ ಸಮಿತಿಯೊಂದಿದ್ದು, ಇದು 1988ರಿಂದ ಕಾರ್ಯ ನಿರ್ವಹಿಸುತ್ತಿದೆ. ಈ ಸಮಿತಿ ಪುನರಶ್ಚೇತನಗೊಳಿಸಬಹುದಾದಂತಹ 309 ಘಟಕಗಳಿಗೆ ಬೀಜಧನ ಸಾಲ ಮಂಜೂರಾತಿ ನೀಡಿದೆ.

## 1995-96ರಲ್ಲಿ ವರ್ಗಾವಣೆಯಾದ ಅಧಿಕಾರಿಗಳ ಸಂಖ್ಯೆ

2105 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) 1995-96ನೇ ಸಾಲಿನಲ್ಲಿ ನಗರಾಭಿವೃದ್ಧಿ ಇಲಾಖೆಯಲ್ಲಿ ವರ್ಗಾವಣೆ ಮಾಡಲಾಗಿರುವ ಅಧಿಕಾರಿಗಳ ಸಂಖ್ಯೆ ಎಷ್ಟು?*

*ಆ) ಕೋರಿಕೆಯ ಮೇಲೆ ಆದ ವರ್ಗಾವಣೆ ಎಷ್ಟು? ಸರಕಾರ ಮಾಡಿರುವ ವರ್ಗಾವಣೆ ಎಷ್ಟು?*

*ಇ) ಇದರಿಂದ ಸರ್ಕಾರದ ಬೊಕ್ಕಸಕ್ಕೆ ಖರ್ಚಾದ ಹಣ ಎಷ್ಟು?*

*ಈ) ನಿವೃತ್ತಿಯ ಅಂಚಿನಲ್ಲಿರುವವರನ್ನು ವರ್ಗಾವಣೆ ಮಾಡಲಾಗಿದೆಯೇ? ಮಾಡಿದ್ದಲ್ಲಿ ಅದನ್ನು ರದ್ದುಪಡಿಸಲಾಗುವುದೆ?*

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಮತ್ತು ಕರ್ನಾಟಕ ಹೈದರಾಬಾದ್ ಅಭಿವೃದ್ಧಿ ಮಂಡಳಿ ಸಚಿವರು) :

ಅ) ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಆಧೀನದಲ್ಲಿ ನಗರ ಯೋಜನಾ ಇಲಾಖೆ ಮತ್ತು ಪೌರಾಡಳಿತ ನಿರ್ದೇಶನಾಲಯಗಳಿರುತ್ತವೆ. ನಗರ ಯೋಜನಾ ಇಲಾಖೆಯಲ್ಲಿ ಒಟ್ಟು 70 ಮತ್ತು ಪೌರಾಡಳಿತ ನಿರ್ದೇಶನಾಲಯದಲ್ಲಿ ಒಟ್ಟು 171 ವರ್ಗಾವಣೆ ಮಾಡಲಾಗಿದೆ.

ಆ) ನಗರ ಯೋಜನಾ ಇಲಾಖೆಯಲ್ಲಿ ಸರ್ಕಾರದಿಂದ ಮಾಡಲಾದ ವರ್ಗಾವಣೆ ಸಂಖ್ಯೆ: 37 ಹಾಗೂ ಕೋರಿಕೆ ಮೇಲೆ ಮಾಡಲಾದ ವರ್ಗಾವಣೆ ಸಂಖ್ಯೆ 33. ಪೌರಾಡಳಿತ ನಿರ್ದೇಶನಾಲಯದಲ್ಲಿ ಸರಕಾರದಿಂದ ಮಾಡಿರುವ ವರ್ಗಾವಣೆ ಸಂಖ್ಯೆ 171 ಕೋರಿಕೆ ಮೇಲೆ ವರ್ಗಾವಣೆ ಮಾಡಿರುವುದಿಲ್ಲ.

ಇ) ನಗರ ಯೋಜನಾ ಇಲಾಖೆಯಲ್ಲಿ ಸರ್ಕಾರದ ಬೊಕ್ಕಸಕ್ಕೆ ಇಲ್ಲಿಯವರೆಗೆ ರೂ. 45.206 ಖರ್ಚಾಗಿರುತ್ತದೆ. ಮತ್ತು ಪೌರಾಡಳಿತ ನಿರ್ದೇಶನಾಲಯದಲ್ಲಿ ಸರ್ಕಾರದ ಬೊಕ್ಕಸಕ್ಕೆ ರೂ. 3,37,000 ಖರ್ಚಾಗಿರುತ್ತದೆ.

ಈ) ನಗರ ಯೋಜನಾ ಇಲಾಖೆಯಲ್ಲಿ 3 ವರ್ಷದೊಳಗಡೆ ವಯೋ ನಿವೃತ್ತಿ ಮೇರೆಗೆ 3 ಮಂದಿಯನ್ನು ಅವರ ಕೋರಿಕೆಯ ಮೇರೆಗೆ ವರ್ಗಾವಣೆ ಮಾಡಲಾಗಿದೆ. ಅವುಗಳನ್ನು ರದ್ದು ಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಪೌರಾಡಳಿತ ನಿರ್ದೇಶನಾಲಯದಲ್ಲಿ ನಿವೃತ್ತಿ ಅಂಚಿನಲ್ಲಿರುವವರನ್ನು ಯಾರನ್ನೂ ವರ್ಗಾವಣೆ ಮಾಡಿರುವುದಿಲ್ಲ.

**ಉಡುಪಿ ತಾಲ್ಲೂಕಿನಲ್ಲಿ ಬೃಹತ್ ಕೈಗಾರಿಕೆ ಸ್ಥಾಪನೆ ಬಗ್ಗೆ.**

2106 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಉಡುಪಿ ತಾಲ್ಲೂಕಿನಲ್ಲಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಲು ಪರವಾನಿಗೆ ನೀಡಲಾಗಿರುವುಗಳ ಸಂಖ್ಯೆ ಎಷ್ಟು?*

*ಆ) ಉಡುಪಿ ತಾಲ್ಲೂಕಿನಲ್ಲಿ ಯಾವ ಯಾವ ಬೃಹತ್ ಕೈಗಾರಿಕೆಗಳಿಗೆ ಎಷ್ಟು ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿದೆ ಮತ್ತು ಇನ್ನು ಎಷ್ಟು ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗುವುದು*

*ಇ) ಈಗ ಪರವಾನಿಗೆ ನೀಡಿರುವ ಬೃಹತ್ ಕೈಗಾರಿಕೆಗಳ ಯೋಜನಾ ವರದಿ ಏನು? (ಯೋಜನಾ ವರದಿಯ ಯಥಾಪ್ರತಿ ನೀಡುವುದು)*

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :